# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಕೆಂಗೇರಿ ಉಪ ವಿಭಾಗ, ವಾರ್ಡ್ ನಂ.198, ಹೆಮ್ಮಿಗೆಪುರ
## ವಾರ್ಡ್ ಸಮಿತಿ ಸಭೆ ದಿನಾಂಕ: 20/03/2021 ರ
## ಸಭಾ ನಡವಳಿ

ದಿನಾಂಕ: 20/03/2021 ರಂದು ಮಧ್ಯಾಹ್ನ 02.30 ಗಂಟೆಗೆ ವಾರ್ಡ್ ನಂ.198, ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಪಟ್ಟಣಗೆರೆ, ಬಿ.ಬಿ.ಎಂ.ಪಿ. ಸಮುದಾಯಭವನ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡವಳಿಗಳು

<u>ಹಾಜರಿದ್ದವರು:</u>

| ಕ್ರ ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಶಿವಕುಮಾರ್ | ನೋಡಲ್ ಅಧಿಕಾರಿ, ವಾರ್ಡ್ ನಂ.198(ಹೆಮ್ಮಿಗೆಪುರ) ಹಾಗೂ ಕಾರ್ಯಪಾಲಕ ಅಭಿಯಂತರರು, ಉಪ ನಿರ್ದೇಶಕರ ಕಛೇರಿ ಕಟ್ಟಡ ಪರವಾನಗೆ ಕೋಶ-ಉತ್ತರ |
| 2 | ಶ್ರೀ ದಯಾನಂದ.ಎನ್ | ಸಹಾಯಕ ಅಭಿಯಂತರರು, ವಾರ್ಡ್-198, ಹೆಮ್ಮಿಗೆಪುರ |
| 3 | ಶ್ರೀಮತಿ ಮೋನಿಕಾ | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ಚಂದನ್ .ಎಸ್ | ವಾರ್ಡ್ ನಂ.198 ಮಾರ್ಷಲ್ |
| 5 | ಶ್ರೀ ಕೃಷ್ಣಾ ನಾಯಕ್ | ಕೆಲಸಪರಿವೀಕ್ಷಕರು ವಾರ್ಡ್ ನಂ.198, ಬಿಬಿಎಂಪಿ |

ಶ್ರೀ ದಯಾನಂದ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ



Scanned with CamScanner

ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಹಿಂದಿನ ಸಭಾ ನಡವಳಿಯನ್ನು ಓದಿ ರೆಕಾರ್ಡ್ ಮಾಡಲಾಯಿತು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

1. **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-** ಅಧ್ಯಕ್ಷರು, ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು ಹಾಗೂ ಕೋವಿಡ್ ಪರಿವೀಕ್ಷಣೆಯಿಂದ ಮೊದಲುಗೊಂಡು ಆಸ್ಪತ್ರೆಗೆ ದಾಖಲಾಗುವವರೆಗೆ ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಪರೀಕ್ಷೆಯನ್ನು ಹೆಚ್ಚು ಮಾಡುವ ಬಗ್ಗೆ ಸಹಕರಿಸುವಂತೆ ಸಭೆಯಲ್ಲಿದ್ದ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರುಗಳು ಮತ್ತು ಅಧಿಕಾರಿ ವರ್ಗದವರಿಗೆ ವಿನಂತಿಸಿ, ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳು ಸದರಿಯವರನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸೂಚಿಸಿದರು ಮತ್ತು ಮಾಷಲ್‌ಗಳನ್ನು ನಿಯೋಜಿಸಿ ಮಾಸ್ಕ್ ಧರಿಸದೇ ಇರುವವರಿಗೆ ದಂಡವನ್ನು ವಿಧಿಸಲು ಸೂಚಿಸಲಾಯಿತು.

2. **ವಿದ್ಯುತ್ ಬೀದಿ ದೀಪಗಳ ನಿರ್ವಹಣೆ:-** ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಮಣಿಪಾಲ್ ಹಾಸ್ಪಿಟಲ್ ರಸ್ತೆಯಲ್ಲಿ ವಿದ್ಯುತ್ ದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲದ್ದರ ಬಗ್ಗೆ & ಹಳೆ ಕನಕಪುರ ರಸ್ತೆಯಲ್ಲಿ ಶರ್ಮ ಗ್ಯಾರೆಜ್ ಹಿಂಭಾಗ ವಿದ್ಯುತ್ ಬೀದಿ ದೀಪಗಳಿಗೆ ಟೈಮರ್‌ಗಳನ್ನು ಅಳವಡಿಸಲು ಸಭೆಗೆ ಕೋರಲಾಯಿತು. ಈ ಸಂಬಂಧ ಬಿ.ಬಿಎಂ.ಪಿ.ಯ ವಿದ್ಯುತ್ ವಿಭಾಗದ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿರುವುದನ್ನು ಗಮನಿಸಿ ನೋಡಲ್ ಅಧಿಕಾರಿಗಳು ವಿದ್ಯುತ್ ವಿಭಾಗದ ಅಭಿಯಂತರರಿಗೆ ದೂರವಾಣಿ ಮೂಲಕ ಸದರಿ ದೂರಿನ ಬಗ್ಗೆ ಕ್ರಮ ವಹಿಸಲು ಕೋರಿದರು.

3. **ಆರೋಗ್ಯ ಇಲಾಖೆ:-** ವಾರ್ಡ್ ನಂ.198ರ ಹೆಮ್ಮಿಗೆಪುರದಲ್ಲಿರುವ ಪ್ರಾಥ್ರಮಿಕ ಆರೋಗ್ಯ ಕೇಂದ್ರ ಕಟ್ಟಡವನ್ನು ದುರಸ್ಥಿಪಡಿಸಿ ಹಾಗೂ ಸ್ವಚ್ಛಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನುಕೂಲವಾಗುವಂತೆ ಮಾಡಲು ವಾರ್ಡ್‌ನ ನಾಗರೀಕರು ಸಭೆಗೆ ಕೋರಿದರು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಸದರಿ ಪ್ರಾಥ್ರಮಿಕ ಆರೋಗ್ಯ ಕೇಂದ್ರವು ಸರ್ಕಾರದ ಆರೋಗ್ಯ ಇಲಾಖೆಯ ಅಧೀನದಲ್ಲಿದ್ದು, ಸದರಿ ಇಲಾಖೆಯ ಮುಖಾಂತರ ವೈಧ್ಯರನ್ನು ನಿಯೋಜಿಸಿ ಸಾರ್ವಜನಿಕ ಅನುಕೂಲವಾಗುವಂತೆ ಮಾಡಿಕೊಡುವಂತೆ ಆರೋಗ್ಯ ಇಲಾಖೆಗೆ ಕೋರಲು ಸಭೆಯಲ್ಲಿ ತೀರ್ಮಾನಿಸಲಾಯಿತು.



Scanned with CamScanner

4.ಘನತ್ಯಾಜ್ಯ ನಿರ್ವಹಣೆ ಬಗ್ಗೆ:- ವಾರ್ಡ್ ನಂ.198ರಲ್ಲಿ ಬರುವ ಬಸಪ್ಪ ಬಡಾವಣೆಯಲ್ಲಿ ಮರದ ಎಲೆಗಳು ಹೆಚ್ಚಾಗಿ ಉದುರುತ್ತಿದ್ದು, ಅದನ್ನು ಸಮರ್ಪಕವಾಗಿ ವಿಲೇ ಮಾಡುವ ಬಗ್ಗೆ ಹಾಜರಿದ್ದ ನಾಗರೀಕರು ಸೂಚಿಸಿದರು. ಈ ಸಂಬಂಧ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಮರಗಳ ಎಲೆಗಳನ್ನು ಸಂಸ್ಕರಿಸುವ ಮತ್ತು ಗೊಬ್ಬರವನ್ನಾಗಿ ಪರಿವರ್ತಿಸುವ ಸಣ್ಣ ಘಟಗಳನ್ನು ಸ್ಥಾಪಿಸಲಾಗಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

5. ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ:- 1)ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಬಾಲಾಜಿ ಬಡಾವಣೆಯಲ್ಲಿ ರಸ್ತೆ ಕಾಮಗಾರಿಯನ್ನು ಕೈಗೊಳ್ಳಬೇಕಾಗಿ ಸಭೆಗೆ ಕೋರಲಾಯಿತು. ಈ ವಿಷಯಗಳ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಸದರಿ ಬಡಾವಣೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕುಡಿಯುವ ನೀರು ಮತ್ತು ಒಳಚರಂಡಿ ಜಾಲವನ್ನು ಸ್ಥಾಪಿಸಲು ರಸ್ತೆಯನ ನು ಅಗೆಯಲಾಗಿದ್ದು ಈ ಸಂಬಂಧ ಸದರಿ ರಸ್ತೆಗಳನ್ನು ಪುನರ್‌ನಿರ್ಮಾಣ ಮಾಡಲು ಕೋರಲಾಗಿದ್ದು, ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.

(ದಯಾನಂದ.ಎನ್)
ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್-198, ಹೆಮ್ಮಿಗೆಪುರ

(ಶಿವಕುಮಾರ್)
ನೋಡಲ್ ಅಧಿಕಾರಿ
ವಾರ್ಡ್ ಸಮಿತಿ
ವಾರ್ಡ್-198, ಹೆಮ್ಮಿಗೆಪುರ

ಪ್ರತಿಯನ್ನು:-

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಸಲ್ಲಿಸಿದೆ.
2) ಕೌನ್ಸಿಲ್ ಕಾರ್ಯದರ್ಶಿ, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
4) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
5) ಅಧೀಕ್ಷಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
6) ಕಾರ್ಯಪಾಲಕ ಅಭಿಯಂತರರು (ಕೆಂಗೇರಿ ವಿಭಾಗ) ರವರ ಅವಗಾಹನೆಗೆ ಸಲ್ಲಿಸಿದೆ.
7) ಕಂದಾಯ ಅಧಿಕಾರಿಗಳು (ಕೆಂಗೇರಿ ವಲಯ) ರವರ ಮಾಹಿತಿಗಾಗಿ ಕಳುಹಿಸಿದೆ.
8) ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ, ರಾಜರಾಜೇಶ್ವರಿನಗರ ವಿಭಾಗ) ರವರ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.



Scanned with CamScanner

9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

10) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಕೆಂಗೇರಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

12) ತೋಟಗಾರಿಕಾ ಅಧೀಕ್ಷಕರು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

13) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಯೋಜನಾ (110 ಹಳ್ಳಿಗಳು) ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.



Scanned with CamScanner